# ಶಿಲುಬೆಯ ಬಳಿಯಲ್ಲಿದ್ದ ಸ್ತ್ರೀಯರು

ಯೇಸು ಶಿಲುಬೆಯ *ಮೊದಲು* ಮೂರು ತಾಸುಗಳ ಕಾಲ ಶ್ರಮೆಯನ್ನು ಅನುಭವಿಸುವಾಗ, ಯೋಹಾನನ ದಾಖಲೆಗಳ ಪ್ರಕಾರ, ಅನೇಕ ಸ್ತ್ರೀಯರು "ಶಿಲುಬೆಯ ಬಳಿಯಲ್ಲಿ ನಿಂತಿದ್ದರು." "ಅಲ್ಲಿ ಆತನ ತಾಯಿಯಾದ [ಮರಿಯಳೂ] ಆತನ ತಾಯಿಯ ತಂಗಿಯೂ ಕ್ಲೋಪನ ಹೆಂಡತಿಯಾದ ಮರಿಯಳೂ, ಮಗ್ದಲದ ಮರಿಯಳೂ ಇದ್ದರು" (ಯೋಹಾನ 19:25). ಕ್ಲೋಪನ ಹೆಂಡತಿಯಾದ ಮರಿಯಳೂ ಪ್ರಾಯಶಃ ಯೇಸುವಿನ ತಾಯಿಯ ತಂಗಿ ಆಗಿದ್ದರೂ, ಅವರು ಇಬ್ಬರು ಬೇರೆ ಬೇರೆಯವರೇ ಆಗಿರಬಹುದು. J. W. McGarvey ರವರ ಪ್ರಕಾರ.[1] (1) ಅ ಸಹೋದರಿಯರಿಬ್ಬರೂ ಒಂದೇ ಹೆಸರನ್ನು ಮರಿಯಳು ಹೊಂದಿರುವದು ಅಸಹಜವಾಗಿರಬಹುದು. (2) "ಯೋಹಾನನ ಪ್ರಕಾರ ಎರಡು ಜೋಡಿ ಸ್ತ್ರೀಯರಿದ್ದು ಅವರ ನಡುವೆ ಎಂಬ ವ್ಯಾಕರಣವನ್ನು ಕಾಣಬಹುದಾಗಿದೆ." ಯೇಸುವಿಗೆ ಸಂಬಂಧ ಪಟ್ಟ ಮೊದಲನೆಯ ಜೋಡಿಯ ಹೆಸರುಗಳನ್ನು ಹೆಸರಿಸಿರುವದಿಲ್ಲ, ಆದರೆ ಯೇಸುವಿಗೆ ಸಂಬಂಧಪಡದ ಇನ್ನೊಂದು ಜೋಡಿಯ ಹೆಸರನ್ನು ಕಾಣಬಹುದಾಗಿದೆ. ಇಬ್ರಿಯ ಬರಹಗಾರರ ಬರವಣಿಗೆಯಲ್ಲಿ ಇಂಥಹ ಬರಹಗಳು ಸಹಜವಾಗಿದೆ.[2] (3) ಮರಿಯಳ ತಂಗಿಯ ಹೆಸರನ್ನು ತಿಳಿಸದೆ ಇರುವದರಿಂದ ಯೋಹಾನನು ತನ್ನವರ ಹೆಸರನ್ನು ಹೆಸರಿಸಲು ಇಚ್ಚಿಸದೆ ಇರಬಹುದು. (ಯೋಹಾನನ್ನು, ಯಾಕೋಬನ, ಅಥವಾ ತನ್ನ ಹಾಗೂ ಯೇಸುವಿನ ತಾಯಿಯ ಹೆಸರನ್ನು ಹೆಸರಿಸಿರುವದಿಲ್ಲ.) ಆದಾಗ್ಯೂ ಯೋಹಾನನು *ನಾಲ್ಕು* ಜನ ಸ್ತ್ರೀಯರಿದ್ದರು ಎಂದು ತಿಳಿಸಿರುವನು.

ಯೇಸುವಿನ ಶಿಲುಬೆಯ *ಕೊನೆಯ* ಮೂರು ತಾಸುಗಳ ಶ್ರಮೆಯ ಸಂದರ್ಭದಲ್ಲಿ ಯೇಸುವಿನ ತಾಯಿಯನ್ನು ಆ ಸ್ಥಳದಿಂದ ದೂರ ಕರಕೊಂಡು ಹೋದರು (ಯೋಹಾನ 19:26, 27) - ಆದರೆ ಮೂರು ಜನ ಸ್ತ್ರೀಯರ ಗುಂಪು ಅಲ್ಲೆ ಇದ್ದು ಕೊಂಡು "ದೂರದಲ್ಲಿದ್ದು ನೋಡುತ್ತಿದ್ದರು" (ಮತ್ತಾಯ 27:55; ಮಾರ್ಕ 15:40). ಮತ್ತಾಯನ ಪ್ರಕಾರವಾದ ಪಟ್ಟಿ: "ಇವರಲ್ಲಿ ಮಗ್ದಲದ ಮರಿಯಳ ಯಾಕೋಬ ಯೋಸೆಯರ ತಾಯಿಯಾದ ಮರಿಯಳೂ ಜೆಬೆದಾಯನ ಮಕ್ಕಳ ತಾಯಿಯೂ ಇದ್ದರು" (ಮತ್ತಾಯ 27:56). ಮಾರ್ಕನ ಪಟ್ಟಿ "ಇದರಅಲ್ಲದೆ ಅಲ್ಲಿ ಸ್ತೀಯರು ಸಹ ದೂರದಿಂದ ನೋಡುತ್ತಿದ್ದರು; ಇವರಲ್ಲಿ, ಆತನು ಗಲಿಲಾಯದಲ್ಲಿದ್ದಾಗ ಆತನನ್ನು ಹಿಂಬಾಲಿಸಿ ಸೇವೆ ಮಾಡುತ್ತಿದ್ದವರಾದ ಮಗ್ದಲದ ಮರಿಯ, ಚಿಕ್ಕ ಯಾಕೋಬನ ಮತ್ತು ಯೋಸೆಪನ ತಾಯಿಯಾದ ಮರಿಯ, ಸಲೋಮೆ ಎಂಬವರೂ ಆತನ ಸಂಗಡ ಯೆರೂಸಲೇಮಿಗೆ ಬಂದಿದ್ದ ಇನ್ನೂ ಅನೇಕ ಸ್ತ್ರೀಯರೂ ಇದ್ದರು" (ಮಾರ್ಕ 15:40). ಮತ್ತಾಯ ಹಾಗೂ ಮಾರ್ಕನ ಪಟ್ಟಿಯಲ್ಲಿ ಎರಡು ಹೆಸರುಗಳನ್ನು ತಿಳಿಸಲಾಗಿದೆ: ಮಗ್ದಲದ ಮರಿಯಳು ಹಾಗೂ ಯಾಕೋಬನ ತಾಯಿಯಾದ ಮರಿಯಳು (ಯೋಸೆಯ) "ಜೆಬೆದಿಯ ತಾಯಿ ಸಲೋಮೆ" ಹೆಸರನ್ನು ಮಾರ್ಕನು ಮತ್ತಾಯನಂತೆ ತಿಳಿಸಿರುವನು ಎಂಬ ಸೂಚನೆಯಿದೆ. ಅಂದರೆ ಸಲೋಮೆಯ ಯಾಕೋಬ ಹಾಗೂ ಯೋಹಾನರ ತಾಯಿ.

ಯೋಹಾನನ ಮೊದಲ ಪಟ್ಟಿಯಲ್ಲಿ ಮಗ್ದಲದ ಮರಿಯಳು ಎಂದಿದ್ದು, ಮತ್ತಾಯ ಹಾಗೂ ಮಾರ್ಕರ ನಂತರದ ಪಟ್ಟಿಯಲ್ಲಿ ಹೆಸರಿಸಲಾಗಿದೆ. ಆ ಪಟ್ಟಿಯು ಒಂದೇ ಸ್ತ್ರೀಯರನ್ನು ನಮೂದಿಸಿವೆ ಎಂಬುದು ಅನೇಕ ಪಂಡಿತರ ವಾದವಾಗಿದೆ. ಇದರ ಪ್ರಕಾರವಾಗಿ ಈ ಕೆಳಗೆ ಪಟ್ಟಿಯನ್ನು ನೀಡಲಾಗಿದೆ:

| *ಯೋಹಾನನು* ಪಟ್ಟಿ | *ಮತ್ತಾಯನ* ಹಾಗೂ ಮಾರ್ಕನ ಪಟ್ಟಿ |
|---|---|
| ಯೇಸುವಿನ ತಾಯಿಯಾದ ಮರಿಯಳು | (ಆ ಸಮಯದಲ್ಲಿ, ಆಕೆಯನ್ನು ಕರಕೊಂಡು ಹೋಗಿದ್ದರು) |
| ಯೇಸುವಿನ ತಾಯಿಯ ತಂಗಿ | ಜೆಬೆದಾಯನ ಹೆಂಡತಿಯಾದ ಸಲೋಮೆ |
| ಕ್ಲೋಫೋಸನ ಹೆಂಡತಿಯಾದ ಮರಿಯಳು | ಯಾಕೋಬ ಮತ್ತು ಯೋಸೇಫನ ತಾಯಿಯಾದ ಮರಿಯಳು |
| ಮಗ್ದಲದ ಮರಿಯಳು | ಮಗ್ದಲದ ಮರಿಯಳು |

**"ಇನ್ನು ಅನೇಕ ಸ್ತ್ರೀಯರು ಅಲ್ಲಿದ್ದರು" (ಮಾರ್ಕ 15:41), ಸಲೋಮೆಯು ಯೇಸುವಿನ ತಾಯಿಯಾದ ಮರಿಯಳ ಸಹೋದರಿ ಎಂಬುದರಲ್ಲಿ ಗೊಂದಲಬೇಡ; ಈ ಪ್ರಕಾರವಾದರೆ ಅಪೊಸ್ತಲರಾದ ಯಾಕೋಬ ಮತ್ತು ಯೋಹಾನರು ಸಂಬಂಧಿಕರು.**

ಟಿಪ್ಪಣಿಗಳು

[1]J. W. McGarvey and Philip Y. Pendleton, T*he Fourfold Gospel or A Harmony of the Four Gospels* (Cincinnati: Standard Publishing Co., 1914), 225. [2]Ibid.